ಎಮ್.ವಿ.ಸಿ. ನಂ.127/2023

PW-1

ದಿನಾಂಕಃ 07-07-2026.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ 2 ನೇ ಎದುರುದಾರರ ಪರ ಶ್ರೀ TGK ಮಾನ್ಯ ವಕೀಲರಿಂದಃ**

1. ಸದರಿ ಅಪಘಾತವು ದಿಃ 16-01-2023 ರಂದು ಆಗಿರುತ್ತದೆ. ಸದರಿ ಅಪಘಾತವು ದೋರನಹಳ್ಳಿ ಕ್ರಾಸ ಹತ್ತಿರ ಆಗಿರುತ್ತದೆ. ಸದರಿ ದಿನದಂದು ನಾನು ಸನ್ನತಿ ಯಿಂದ ನನ್ನ ಬೈಕ ನಂಬರ KA-33-EA-4241 ರ ಮೇಲೆ ಹೋಗುತ್ತಿದ್ದೆ. ನಾನು ಸದರಿ ದಿನದಂದು ನಾನು ನನ್ನ ಸದರಿ ಬೈಕನ್ನು ರಸ್ತೆಯ ಎಡಭಾಗ ತೆಗೆದುಕೊಂಡು ನಿಧನವಾಗಿ ಹೋಗುತ್ತಿದ್ದಾಗ ಇನ್ನೊಂದು ಬೈಕ ಚಾಲಕನು ವೇಗವಾಗಿ ಬಂದು ನನ್ನ ಬೈಕಗೆ ಡಿಕ್ಕಿಪಡಿಸಿರುತ್ತಾರೆ. ನನ್ನನ್ನು ಗುದ್ದಿದ್ದ ಬೈಕ ನಂಬರ KA-33-X-6774 ಆಗಿರುತ್ತದೆ. ಸದರಿ ದಿನದಂದು ಸದರಿ ಬೈಕನ್ನು ನನ್ನ ಅಣ್ಣ ಮಾನಪ್ಪ ಇವರು ಚಲಾಯಿಸುತ್ತಿದ್ದರು. ನನ್ನ ಅಣ್ಣ ಇವರಿಗೆ DL ನ್ನು ಹೊಂದಿದ್ದು ನಾನು ಅದನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಡಿಕ್ಕಿಪಡಿಸಿದ ಬೈಕನ್ನು ಸದರಿ ದಿನದಂದು ಗುಂಡಪ್ಪ ಎನ್ನುವವರು ಓಡಿಸುತ್ತಿದ್ದು ಎಂದು ಹೇಳಿ ಸಾಕ್ಷಿ ಮುಂದುವರೆದು ತಮಗೆ ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಅಣ್ಣ ಮಾನಪ್ಪ ಇವರು ದಿಃ22-01-2023 ಕ್ಕೆ ಸದರಿ ಅಪಘಾತದ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅಪಘಾತವಾದ ಆರು ದಿನಗಳ ನಂತರ ಸದರಿ ದೂರನ್ನು ಸಲ್ಲಿಸಲಾಗಿರುತ್ತದೆ ಎಂದರೆ ನನಗೆ ನೆನಪಿರುವುದಿಲ್ಲ. ನನ್ನನ್ನು ಗುದ್ದಿದ್ದ ಸದರಿ ಬೈಕ ಚಾಲಕ ನನಗೆ ಚಿಕಿತ್ಸೆಯನ್ನು ಕೊಡಿಸಿ ಪರಿಹಾರದ ಹಣವನ್ನು ಕೊಡುತ್ತೇನೆ ಎಂದು ಹೇಳಿದ್ದರ ಮೇರೆಗೆ ಸದರಿ ದೂರನ್ನು ವಿಳಂಬವಾಗಿ ಸಲ್ಲಿಸಿರುತ್ತೇವೆ. ನನ್ನ ಅಣ್ಣ ಸದರಿ ಬೈಕ ನ್ನು KA-33-X-6774 ಕ್ಕೆ ಡಿಕ್ಕಿಪಡಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಅಣ್ಣ ಸದರಿ

ವಾಹವನ್ನು ಓಡಿಸಲು DL ಹೊಂದಿರಲಿಲ್ಲ ಹಾಗೂ ಅವರ ತಪ್ಪಿನಿಂದ ಸದರಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತವಾಗುವಲ್ಲಿ Ka-33-X-6774 ರ ಚಾಲಕನ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ.

2. ಸದರಿ ಅಪಘಾತದಲ್ಲಿ ನನ್ನ ಎಡ ಕಪಾಲು, ತಲೆಗೆ ಹಾಗೂ ಮೂಗಿಗೆ ಪೆಟ್ಟಾಗಿದ್ದು, ಹಾಗೂ ಮೇಲಿನ ಮೂರು ಹಲ್ಲುಗಳು ಮುರಿದಿರುತ್ತವೆ. ಅಪಘಾತವಾದ ನಂತರ ನನ್ನನ್ನು ಶಹಾಪೂರಿನ ಸರ್ಕಾರಿ ಆಸ್ಪತ್ರೆಗಳ ಚಿಕಿತ್ಸೆಗೆ ಕರೆದುಕೊಂಡು ಹೋಗಲಾಗಿರುತ್ತದೆ. ನಾನು ಬೆಂಗಳೂರಿನ ವಿಪ್ರೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಹೆಚ್ಚಿನ ಚಿಕಿತ್ಸೆಯನ್ನು ಚಿರಾಯು ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತೇನೆ. ನಾನು ಸದರಿ ಎರಡು ಆಸ್ಪತ್ರೆಗಳಲ್ಲಿ ಸೇರಿ ಸುಮಾರು 1 ವಾರ ಒಳರೋಗಿಯಾಗಿ ದಾಖಲಾಗಿದ್ದೆ. ನಾನು ಸದರಿ ಆಸ್ಪತ್ರೆಗಳಲ್ಲಿ 1 ವಾರ ಒಳರೋಗಿಯಾಗಿ ದಾಖಲಾಗಿದ್ದೆ ಎಂದು ತೋರಿಸಲು ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಬೆಂಗಳೂರಿನಲ್ಲಿ Pharmacist ಎಂದು ಕೆಲಸ ಮಾಡುತ್ತಿದ್ದೆ. ನಾನು ಸದರಿ ಅಂಗಡಿಯನ್ನು ನಡೆಸುತ್ತಿದ್ದೇನೆ ಎಂದು ತೋರಿಸಲು ಪರವಾನಿಗೆಯನ್ನು ಹಾಜರುಪಡಿಸಿರುತ್ತೇನೆ. ನಾನು ಈ ದಿನದವರೆಗೂ ಸದರಿ ಅಂಗಡಿಯಲ್ಲಿ ಕೆಲಸ ವಾಡುತ್ತಿದ್ದೇನೆ ಎಂದರೆ ಸರಿ. ನಾನು ಈ ದಿನ ಈ ನ್ಯಾಯಾಲಯಕ್ಕೆ ಸಾಕ್ಷಿಯನ್ನು ಕೊಡಲು ಬೆಂಗಳೂರಿನಿಂದ ಬಂದಿರುತ್ತೇನೆ ಎಂದರೆ ಸರಿ. ನಾನು ಸದರಿ ಅಪಘಾತದಿಂದ ಯಾವುದೇ ಶಾಶ್ವತ ಅಂಗನ್ಯೂನ್ಯತೆ ಆಗಿರುವುದಿಲ್ಲ ಹಾಗೂ ನಾನು ಈ ಮೊದಲಿನಂತೆ ಸದರಿ ಕೆಲಸವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

3. ಅಪಘಾತವಾದ ಸಂದರ್ಭದಲ್ಲಿ ನನಗೆ 30 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ನನ್ನ ಆಧಾರ ಕಾರ್ಡನ್ನು ಹಾಜರುಪಡಿಸಿರುತ್ತೇನೆ. ನಾನು ಸದರಿ ಕೆಲಸದಿಂದ ಪ್ರತಿ ತಿಂಗಳು ರೂ.25,000/- ಗಳ ಆದಾಯವನ್ನು ಹೊಂದಿದ್ದೆ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸದರಿ ಅಪಘಾತದಲ್ಲಿ ಯಾವುದೇ ನ್ಯೂನ್ಯತೆ ಆಗದೇ ಇದ್ದರೂ ಕೂಡಾ ಹೆಚ್ಚಿನ ಪರಿಹಾರದ ಹಣವನ್ನು ಪಡದುಕೊಳ್ಳಲು ವೈದ್ಯಕೀಯ ದಾಖಲೆಗಳನ್ನು ಸುಳ್ಳು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗಾಗಿ ರೂ.2,00,000/- ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಚ್ಚಿನ ಚಿಕಿತ್ಸೆಗಾಗಿ ರೂ.1,00,000/- ಗಳು ಬೇಕಾಗಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಆಧಾರ ಇಲ್ಲದೇ ರೂ.30,00,000/ ಗಳ ಪರಿಹಾರದ ಹಣವನ್ನು ಕೇಳಿರುತ್ತೇನೆ ಎಂದರೆ ಸರಿಯಲ್ಲ. ವಾಹನ ನಂಬರ KA-33-X-6774 ರ ಚಾಲಕನು DL ನ್ನು ಹೊಂದಿರಲಿಲ್ಲ ಹಾಗೂ ಅದಕ್ಕೆ ವಿಮೆಯನ್ನು ಮಾಡಿಸದ ಕಾರಣ 2 ನೇ ಎದುರುದಾರರು ನನಗೆ ಯಾವುದೇ ಪರಿಹಾರದ ಹಣವನ್ನು ಕೊಡುವ ಭಾದ್ಯತೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.